

ಎಂದಿಗೂ ತೆಗೆದುಕೊಳ್ಳುವುದಿಲ್ಲ, ಕನಿಷ್ಠ ತಾತ್ವಿಕ ನೆಲೆಗಳಲ್ಲಿಯಾದರೂ... ಹೀಗಾಗಿಯೇ ಅನೇಕ ಬರಹಗಾರರ ಕನಸಾದ ಬೆಸ್ಟ್ ಸೆಲ್ಲರ್ ಒಂದನ್ನು ನನ್ನಿಂದ ಬರೆಯಲಾಗಲಿಲ್ಲ. ನನ್ನ ಇತ್ತೀಚಿಗಿನ ಕಾದಂಬರಿಯಾದ **Fiscal muere** ನಮ್ಮ ನಾಡಿನ ರಾಜಕೀಯ ವಾಸ್ತವವನ್ನು ಬಿರುಸಾಗಿ ಹೇಳುವ ಥ್ರಿಲ್ಲರ್ ಆಗಿರಬೇಕಿತ್ತು. ಆದರೆ, ಕಥೆಯ ಮುಖ್ಯಧಾತುವನ್ನು ನನಗೆ ತೋರಿಸಿದ ಕಾದಂಬರಿಯ ಮುಖ್ಯಪಾತ್ರ ತನ್ನ ಪತ್ತೇದಾರಿ ಕೌಶಲ್ಯವನ್ನು ಅಭಿವ್ಯಕ್ತಿಸುವುದಕ್ಕಿಂತ ಮುಂಚೆ ತನ್ನ ವೈಯುಕ್ತಿಕ ಬದುಕಿನ ಕುರಿತು ಬರೆಯುವಂತೆ ನನ್ನನ್ನು ನಿರ್ಬಂಧಿಸಿತು.

◆ **ಪೆರುಂದೇವಿ: ಅನೇಕ ಲ್ಯಾಟಿನ್ ಅಮೆರಿಕನ್ ಬರಹಗಾರರಿಗೆ ಪ್ರಿಯವಾದ 'ಮಾಯಾವಾಸ್ತವ' ಕುರಿತಾದ ನಿಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳುವಿರಾ? ಕಣ್ಣೆದುರಿಗಿನ ವಾಸ್ತವವನ್ನು ಬೇರೆ ಬಗೆಯಲ್ಲಿ ಹೇಳಲು ಬಳಸುವ ಅಥವಾ ವಾಸ್ತವದ ಹಲವಾರು ಪದರುಗಳನ್ನು ಬಿಡಿಸಲು ಬಳಸುವ ಪ್ರಕಾರವನ್ನೇ ಮ್ಯಾಜಿಕಲ್ ರಿಯಲಿಸಂ ಎನ್ನುವಿರಾ? ಅರ್ಜಂಟೈನಾದಲ್ಲಿ ಸರ್ವಾಧಿಕಾರ ಇರಲಿಲ್ಲವೆಂದರೆ ಬೇರೆ ಯಾವುದಾದರೂ ಪ್ರಕಾರವನ್ನು ಉಪಯೋಗಿಸುತ್ತಿದ್ದೀರಾ? (1970ರ ದಶಕದ ಅರ್ಜೆಂಟೈನಾದಲ್ಲಿ ನಡೆದ ರಾಜಕೀಯ ಕ್ಷೋಭೆಯ ನಂತರ ನೀವು**